**ದಿನಾಂಕ: 13-03-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ಎಸ್.ಪಿ. ವಕೀಲರಿಂದ**

1. ಅಪಘಾತವಾದ ಸಮಯದಲ್ಲಿ ನಿಮ್ಮ ಮಗಳ ವಯಸ್ಸು ಎಷ್ಟು ಇತ್ತು ಎಂದರೆ 16 ವರ್ಷ ವಯಸ್ಸು ಇತ್ತು ಎಂದು ಉತ್ತರಿಸಿ 8ನೇ ತರಗತಿ ಓದುತ್ತಿದ್ದಳು ಎಂದು ಉತ್ತರಿಸುತ್ತಾರೆ. ನಿಮ್ಮ ಮಗಳ ವಯಸ್ಸು 16 ವರ್ಷ ವಯಸ್ಸು ಇತ್ತು ಎಂದು ತೋರಿಸಲು ಯಾವ ದಾಖಲಾತಿ ಹಾಜರುಪಡಿಸಿದ್ದೀರಿ ಎಂದರೆ ಶಾಲಾ ದೃಢೀಕರಣ ಪತ್ರ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ.

2. ಅಪಘಾತವಾದ ದಿನ ನಿಮ್ಮ ಮಗಳು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದಳು ಎಂದರೆ ಮನೆಯಿಂದ ಶಾಲೆ ಪೇಪರ್ ಬರೆಯಲು ಪೇಪರ್ ತರಲು ಹೋಗಿದ್ದಳು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನಿಮ್ಮ ಮಗಳ ಜೊತೆಯಲ್ಲಿ ಯಾರು ಇದ್ದರು ಎಂದರೆ ಯಾರೂ ಇರಲಿಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವು ದಿನಾಂಕ 13-03-2023ಕ್ಕೆ ಆಗಿರುತ್ತದೆ. ನಿಮ್ಮ ಮಗಳಾದ ಭಾಗ್ಯಶ್ರೀಗೆ ಸ್ಕಾಲರಶಿಪ್ ಬರುತ್ತಿತ್ತಾ ಎಂದರೆ ಬರುತ್ತಿತ್ತು ಎಂದು ಉತ್ತರಿಸುತ್ತಾರೆ. ಅದರ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿಲ್ಲ. ನಿಮ್ಮ ಮಗಳಿಗೆ ಅಪಘಾತ ಆಗಿಲ್ಲ ಅವಳು ಎಲ್ಲೋ ಬಿದ್ದು ಗಾಯ ಆಗಿ ತೀರಿಕೊಂಡಿದ್ದರೂ ಸಹ 1ನೇ ಎದುರುದಾರರೊಂದಿಗೆ ಶಾಮೀಲಾಗಿ 2ನೇ ಎದುರುದಾರರ ಮೇಲೆ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ.

3. ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯ ಏನಾದರೂ ಮಾಡಿಸುತ್ತೀರಾ ಎಂದರೆ ಅಪಘಾತ ಆದಾಗ ಸಾಕ್ಷಿ ಹೇಳಲು ಬಿಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವು 1ನೇ ಎದುರುದಾರರ ನಿರ್ಲಕ್ಷತನದಿಂದ ಆಗಿಲ್ಲ ನಿಮ್ಮ ಮಗಳ ನಿರ್ಲಕ್ಷತನದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ